

ಮೇಲೇರುವ ಹೊತ್ತಿಗೆ ಮುಂಜಾವಿನ ದೂಳು ಸರಿಸಿಕೊಂಡ ರಸ್ತೆಗಳು ಉನ್ಮಾದ ಧಾವಂತದಲ್ಲಿ ಕೆಲಸ ಆರಂಭಿಸಿರುತ್ತವೆ. ತನ್ನ ಮೇಲೆ ನಿಂತ ಎಲ್ಲ ಚಕ್ರಗಳನ್ನೂ ಎಲ್ಲೆಂದರಲ್ಲಿ ತಲುಪಿಸುವ ಕಾಯಕದಲ್ಲಿ ಹಾದಿ ಬೀದಿಗಳು ತೊಡಗಿರುತ್ತವೆ. ಅದೇ ಅವರಸರದ ರಸ್ತೆಯ ಬದಿಯಲ್ಲಿರುವ, ಜಗತ್ತಿಗೆ ಬೆಂಗಳೂರಿನ ವಿಶೇಷ ಕೊಡುಗೆಯೆಂದು ಪರಿಗಣಿಸಲಾಗುವ ದರ್ಶಿನಿಗಳು ವಿಶೇಷ ಘಮಲು ಹಬೆ ಬಿಸಿಗಳಲ್ಲಿ ಮುಳುಗೇಳುತ್ತಾ ಕೆಲಸಕ್ಕೆ ಹೋಗುವ ತರಾತುರಿಯ ಗ್ರಾಹಕರನ್ನೂ, ನಿವೃತ್ತ ಜೀವನದ ನಿಧಾನಲಯದಲ್ಲಿ ನುಡಿಯುವ ನಡೆಯುವ ಹಿರಿಯರನ್ನು ಸುಧಾರಿಸಿ ಸತ್ಕರಿಸುತ್ತವೆ. ಎಕ್ಸ್‌ಟ್ರಾ ಚಟ್ನಿ ಸಾಂಬಾರುಗಳನ್ನೂ ಬೈಟೂ ಚಾ ಕಾಫಿಗಳನ್ನೂ ಬಡಿಸಿ ತಣಿಸುತ್ತವೆ. ಮುಂಜಾವಿನ ಅಲ್ಲಿಯ ತನಕದ ಸಾಮರಸ್ಯದ ಸಾಮಾಜಿಕ ಆಂದೋಲನದಂತೆ ತೋರುವ ನಡಿಗೆ, ವ್ಯಾಯಾಮ, ಫಲಾಹಾರಗಳ ನಂತರ ಬೆಂಗಳೂರು ನಿಜವಾದ ವೈರುಧ್ಯ ಪಂಥ ಸವಾಲುಗಳಲ್ಲಿ ಅನಿವಾರ್ಯವಾಗಿ ಧುಮುಕುತ್ತದೆ. ಅದು ದೈನಿಕದ ನಿತ್ಯಸತ್ಯ ಹೋರಾಟ ಹಾರಾಟ. ಬೆಳಗಿನಿಂದ ತಡ ರಾತ್ರಿಯ ತನಕ ವೈಯಕ್ತಿಕ ಅಲ್ಲದಿದ್ದರೆ ಕೌಟುಂಬಿಕ ನೆಲೆಯನ್ನು ಬೆಂಗಳೂರಿನಲ್ಲಿ ಗಟ್ಟಿಯಾಗಿ ನಿಲ್ಲಿಸುವ ಪ್ರಕ್ಷುಬ್ಧ ಸಾಗರದಲ್ಲಿ ಈಸುವ ಜೈಸುವ ಪ್ರಯಾಸ ಕ್ಷಣ ಕ್ಷಣಕ್ಕೂ ನಡೆಯುತ್ತದೆ. ಮೇಲ್ಸೇತುವೆಗಳು ಉಕ್ಕಿ ಹರಿಯುತ್ತವೆ. ಜನವಾಹನದ ವಿಶಾಲ ಸಾಗರ ದಿಕ್ಕುದಿಕ್ಕಿಗೆ ಹರಿದು ಮೊರೆಯುತ್ತದೆ. ಮುಗಿಲಿನೆತ್ತರದ ಹಳೆಯ ಹೊಸ ಕಟ್ಟಡಗಳು, ಹೊಚ್ಚ ಹೊಸ ಯೋಜನೆಗಳು ಸೊಂಟದ ಮೇಲೆ ಕೈಯಿಟ್ಟು